
ಡೆಸರ್ಟ್ ನ್ಯಾಷನಲ್ ಪಾರ್ಕ್

## ಅವಸಾನಕ್ಕೆ ಕಾರಣ?

ಗಿಬ್ ಪಕ್ಷಿಯ ಮಾಂಸ ಕಾಮೋತ್ತೇಜಕ ಎನ್ನುವ ನಂಬಿಕೆ ರಾಜರ ಕಾಲದಿಂದಲೂ ಇತ್ತು. ಇದಕ್ಕಾಗಿ ಕೊಲ್ಲುತ್ತಿದ್ದರೆಂದು ಕೇಳಿರುವುದಾಗಿ ವಿಜ್ಞಾನಿ ಸೋಹನ್ ತಿಳಿಸಿದರು. ಕೃಷಿ ಭೂಮಿ ವಿಸ್ತರಣೆ, ಸೌರ ವಿದ್ಯುತ್, ಪವನ ವಿದ್ಯುತ್ ಶಕ್ತಿಗೆ ತಂತಿಗಳನ್ನು ಅಳವಡಿಸಿರುವ ಕಾರಣ ಅವಸಾನದಂಚಿಗೆ ತಲುಪಿವೆ. ಈ ಪಕ್ಷಿಗಳಿಗೆ ದೂರದೃಷ್ಟಿ ಚುರುಕಾಗಿಲ್ಲದ ಕಾರಣ ಶೇ.15ರಷ್ಟು ಪಕ್ಷಿಗಳು ಹೈ ಟೆನ್ಷನ್ ವಿದ್ಯುತ್ ತಂತಿ ಸ್ಪರ್ಶದಿಂದ ಮೃತಪಟ್ಟಿವೆ. ಈ ತಂತಿಗಳನ್ನು ಭೂಮಿಯಲ್ಲಿ ಅಳವಡಿಸಬೇಕೆಂದು ಸುಪ್ರೀಂ ಕೋರ್ಟ್ ಆದೇಶಿಸಿದೆ. ಆದರೆ, ಅನುಷ್ಠಾನ ವಿಳಂಬವಾಗುತ್ತಿದೆ.

**ಅವಸಾನದತ್ತ ಬಸ್ಟರ್ಡ್:** ಭಾರತದಲ್ಲಿ ಕೇವಲ 147 ‘ಗ್ರೇಟ್ ಇಂಡಿಯನ್ ಬಸ್ಟರ್ಡ್’ ಪಕ್ಷಿಗಳು ಇವೆ. ಅವುಗಳಲ್ಲಿ ಬಹುತೇಕ ರಾಜಸ್ಥಾನದಲ್ಲಿವೆ. ಪೋಖ್ರಾನ್ ಫೀಲ್ಡ್ ಫೈರಿಂಗ್ ರೇಂಜ್ ವ್ಯಾಪ್ತಿಯಲ್ಲಿ ಹಾಗೂ ಜೈಸಲ್ಮೇರ್–ಬಾರ್ಮರ್ ಜಿಲ್ಲೆಗಳ ಮಧ್ಯೆ ಹರಡಿದ ಡೆಸರ್ಟ್ ನ್ಯಾಷನಲ್ ಪಾರ್ಕ್ ವ್ಯಾಪ್ತಿಯಲ್ಲಿ ಈ ಪಕ್ಷಿಗಳ ಸಂತತಿ ಉಳಿದಿದೆ. ಶುಷ್ಕ ಮತ್ತು ಅರೆಶುಷ್ಕ ಹುಲ್ಲುಗಾವಲು ಕಾಪಾಡುವಲ್ಲಿ ಈ ಪಕ್ಷಿಗಳದ್ದು ಪ್ರಮುಖ ಪಾತ್ರ. ಇತರೆ ವನ್ಯಜೀವಿಗಳಿಗಾಗಿ ಹಾಗೂ ಅಂತರ್ಜಲ ವೃದ್ಧಿಗೆ ಹುಲ್ಲುಗಾವಲು ಉಳಿಯಬೇಕಾದರೆ ಈ ಪಕ್ಷಿಗಳ ಅಸ್ತಿತ್ವ ತುಂಬಾ ಅಗತ್ಯ. ಈ ಪಕ್ಷಿಗೆ ರಾಜಸ್ಥಾನದ ಮರುಭೂಮಿ ಭದ್ರಕೋಟೆಯಂತಾಗಿದ್ದು, ಇದು ಕೊನೆಯ ಆಶ್ರಯ ತಾಣವಾಗಿ ಉಳಿದಿದೆ.

**ಪಕ್ಷಿಗಳ ಸ್ಥಿತಿಗತಿ:** ‘ದೇಶದಲ್ಲಿ ಈಗ ಬದುಕುಳಿದ 147 ಬಸ್ಟರ್ಡ್ ಪಕ್ಷಿಗಳ ಪೈಕಿ ಏಳು ಪಕ್ಷಿ ಮಾತ್ರ ನೋಡಲು ಸಾಧ್ಯವಾಯಿತು. ಶೇ 95ರಷ್ಟು ಪಕ್ಷಿಗಳು ಜೈಸಲ್ಮೇರ್‌ನಲ್ಲಿವೆ. ಗುಜರಾತ್, ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದಲ್ಲಿಯೂ ಕಾಣಿಸಿಕೊಂಡ ವರದಿಯಾಗಿದೆ. ಈ ಮೂರು ರಾಜ್ಯಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಬಸ್ಟರ್ಡ್ ಪಕ್ಷಿಗಳಿವೆ’ ಎಂದು ತಿಳಿಸಿದ್ದಾರೆ. ‘ಏಷ್ಯಾದ ಅತಿ ಭಾರವಾದ ಹಾರುವ ಪಕ್ಷಿ’ ಎನ್ನುವ ಹೆಗ್ಗಳಿಕೆ ಗ್ರೇಟ್ ಇಂಡಿಯನ್ ಬಸ್ಟರ್ಡ್‌ದ್ದಾಗಿತ್ತು. 11 ರಾಜ್ಯಗಳಲ್ಲಿ ಅವುಗಳ ಸಂತತಿ ಇತ್ತು.

ಕರ್ನಾಟಕದ ಬಳ್ಳಾರಿ ಜಿಲ್ಲೆ ಶಿರಗುಪ್ಪದಲ್ಲಿ ಮತ್ತು ಹಾವೇರಿ ಜಿಲ್ಲೆ ರಾಣೆಬೆನ್ನೂರಿನಲ್ಲಿ 30 ವರ್ಷಗಳ ಹಿಂದೆ ಇವು ಕಂಡುಬರುತ್ತಿದ್ದವು. ಈ ಪಕ್ಷಿಗಳನ್ನು ಕನ್ನಡದಲ್ಲಿ ‘ಎರ್ಲಡ್ಡು ಪಕ್ಷಿ’ ಅಥವಾ ‘ಮಹಾಭಾರತೀಯ ಒಂಟಿ ಪಕ್ಷಿ’ ಎಂದು ಕರೆಯುತ್ತಿದ್ದರು. ಆ ನಂತರ ಈ ಪಕ್ಷಿಗಳು ಮತ್ತೆ ಕಾಣಿಸಿಲ್ಲ. ಸಂಶೋಧಕರು ಹೇಳುವ ಪ್ರಕಾರ, ಶಿರಗುಪ್ಪದಲ್ಲಿ ಮೂರು ಪಕ್ಷಿಗಳು ಪತ್ತೆಯಾಗಿವೆ.

**ಪಕ್ಷಿ ಸಂರಕ್ಷಣಾ ಕೇಂದ್ರಗಳು:** ಸ್ಯಾಮ್ ಕೇಂದ್ರದಲ್ಲಿ 21 ಹಾಗೂ ರಾಮದೇವ್ರಾ ಕೇಂದ್ರದಲ್ಲಿ 48 ಬಸ್ಟರ್ಡ್ ಪಕ್ಷಿಗಳಿವೆ. 2019ರಲ್ಲಿ ಬಸ್ಟರ್ಡ್ ಪಕ್ಷಿಯ ಮೊದಲ ಮೊಟ್ಟೆ ಸಂಗ್ರಹಿಸಿ ತರಲಾಯಿತು. ಕೃತಕವಾಗಿ ಜನ್ಮ ತಾಳಿದ ಮೊದಲ ಪಕ್ಷಿಗೆ ‘ಉನೊ’ ಎಂದು ಹೆಸರಿಡಲಾಯಿತು. ಅಲ್ಲಿಂದ ಆರಂಭಿಸಿ, ಈ ಕೇಂದ್ರಗಳಲ್ಲಿರುವ ಸಂಶೋಧಕರು, ತಂತ್ರಜ್ಞರು ಹಾಗೂ ವಿಜ್ಞಾನಿಗಳು ಸೇರಿ 70 ಜನರ ತಂಡ ಪ್ರತಿವರ್ಷ 5ರಿಂದ 10 ಮೊಟ್ಟೆಗಳನ್ನು ಸಂಗ್ರಹಿಸುತ್ತಾ ಬಂದಿದೆ.

**ಪಕ್ಷಿಗಳಿಗೆ ಮಾನವ ಪೋಷಣೆ:** ಪೋಖ್ರಾನ್‌ದಿಂದ 20 ನಿಮಿಷ ಸಂಚರಿಸಿ ರಾಮದೇವ್ರಾ ಕೇಂದ್ರಕ್ಕೆ ತಲುಪಿದೆವು. ಬಸ್ಟರ್ಡ್ ಪಕ್ಷಿ ಉಳಿಸಿಕೊಳ್ಳುವ ಯೋಜನೆ ಹಿಂದೆ ವೈಜ್ಞಾನಿಕವಾಗಿ ದೊಡ್ಡ ಶಕ್ತಿಯಾಗಿರುವ ಸುತೀರ್ಥ ದತ್ತಾ ಅಲ್ಲಿದ್ದರು.

‘ಮೊಟ್ಟೆಗಳನ್ನು ಸಂಗ್ರಹಿಸಿದ ತಕ್ಷಣ, ಧಕ್ಕೆ ಆಗದಂತೆ ಕುಷನ್ ವ್ಯವಸ್ಥೆಯ ಮಂಜುಗಡ್ಡೆ ಪೆಟ್ಟಿಗೆಯಲ್ಲಿರಿಸಲಾಗುತ್ತದೆ. ಮೊಟ್ಟೆಯ ಪ್ರತಿ ವಿವರ ಆ್ಯಪ್‌ನಲ್ಲಿ ಸೇರುತ್ತದೆ. 22 ದಿನಗಳಲ್ಲಿ ಮೊಟ್ಟೆಯಿಂದ ಮರಿಗಳು ಹೊರಬರುತ್ತವೆ. ಇಡೀ ತಂಡ ಅವುಗಳಿಗೆ ‘ತಾಯಿ’ಯಂತೆ ಪೋಷಿಸುತ್ತದೆ’ ಎಂದು ಮಾಹಿತಿ ನೀಡಿದರು.

**ಪಕ್ಷಿಗಳ ಪುನರುತ್ಥಾನ ಸಾಹಸ:** ಬಸ್ಟರ್ಡ್ ಪಕ್ಷಿ ಸಂಕುಲ ಸಂರಕ್ಷಿಸುವ ಉದ್ದೇಶದಿಂದ ರಾಜಸ್ಥಾನದ ಅರಣ್ಯ ಇಲಾಖೆಯು ಡೆಹ್ರಾಡೂನ್ ಭಾರತೀಯ ವನ್ಯಜೀವಿ ಸಂಸ್ಥೆ (ಡಬ್ಲ್ಯುಐಐ) ಸಹಯೋಗದಲ್ಲಿ ‘ಡೆಸರ್ಟ್ ನ್ಯಾಷನಲ್ ಪಾರ್ಕ್’ ವ್ಯಾಪ್ತಿಯಲ್ಲಿ ಮೂರು ಹುಲ್ಲುಗಾವಲು ಪ್ರದೇಶಗಳನ್ನು ಅಭಿವೃದ್ಧಿ ಮಾಡಿದೆ. ಈ ಪ್ರದೇಶಕ್ಕೆ ಎರಡು ಹಂತದಲ್ಲಿ ಲೋಹದ ಬೇಲಿ ಹಾಕಿದ್ದು, ಮನುಷ್ಯರು ಹಾಗೂ ದನಕರುಗಳ ಯಾವುದೇ ಉಪಟಳ ಇಲ್ಲ. ಬಸ್ಟರ್ಡ್ ಪಕ್ಷಿ ಆಹಾರವಾಗಿ ಸೇವಿಸುವ ಮಿಡತೆ ಹಾಗೂ ಕೀಟಗಳನ್ನು ಆಕರ್ಷಿಸುವ ನಿರ್ದಿಷ್ಟ ಹುಲ್ಲುಗಾವಲು ಇದಾಗಿದೆ.

ಈ ಹುಲ್ಲುಗಾವಲು ಪ್ರದೇಶಕ್ಕೆ ಪ್ರತಿದಿನವೂ 10 ಸಂಶೋಧಕರು ಹಾಗೂ ತಂತ್ರಜ್ಞರ ತಂಡ ಪಕ್ಷಿಗಳ ಹುಡುಕಾಟಕ್ಕೆ ಬರುತ್ತದೆ. ಗೂಡು ಕಟ್ಟಿ ಮೊಟ್ಟೆ ಇಡುವ ಹೆಣ್ಣು ಪಕ್ಷಿಗಳ ಕಡೆಗೆ ನಿಗಾ ವಹಿಸುತ್ತದೆ. ಪಕ್ಷಿಗಳ ಸಂತತಿ ಪುನರುತ್ಥಾನ ಕಾರ್ಯಕ್ಕೆ ಗೂಡು ಪತ್ತೆ ಪ್ರಥಮ ಆದ್ಯತೆ. ಗೂಡಿನಿಂದ ಸಂಗ್ರಹಿಸುವ ಮೊಟ್ಟೆಗಳನ್ನು 160 ಕಿ.ಮೀ. ದೂರದ ಸಂರಕ್ಷಿತ ಸಂತಾನೋತ್ಪತ್ತಿ ಕೇಂದ್ರಗಳಾದ ಸ್ಯಾಮ್ ಮತ್ತು ರಾಮದೇವ್ರಾಗೆ ಕಳುಹಿಸಿ ಕೃತಕ ವಿಧಾನದಲ್ಲಿ ಕಾವು ಒದಗಿಸಲಾಗುತ್ತದೆ. ಹೆಣ್ಣು ಪಕ್ಷಿ ಗೂಡಿನಲ್ಲಿ ಇಲ್ಲದ ಸಮಯ ಸಾಧಿಸಿ ಅಸಲಿ ಮೊಟ್ಟೆ ಎತ್ತಿಕೊಂಡು, ನಕಲಿ ಮೊಟ್ಟೆ ಇರಿಸಲಾಗುತ್ತದೆ. ಮೊಟ್ಟೆ ಮಾಯವಾಗಿದ್ದಕ್ಕೆ ಪಕ್ಷಿ ಒತ್ತಡಕ್ಕೆ ಒಳಗಾಗಬಾರದು ಎನ್ನುವುದು ನಕಲಿ ಮೊಟ್ಟೆ ಇರಿಸುವ ಉದ್ದೇಶ.

‘ಗಿಬ್ ಪಕ್ಷಿ ಒಂದು ಮೊಟ್ಟೆ ಇಟ್ಟು, ಅದರಿಂದ ಹೊರಬರುವ ಮರಿ ಪೋಷಿಸುವುದಕ್ಕಾಗಿ ಒಂದು ವರ್ಷ ಮೀಸಲಿಡುತ್ತದೆ. ಬಹಳಷ್ಟು ಸಂದರ್ಭ, ಮರಿ ದೊಡ್ಡದಾಗುವವರೆಗೂ ಬದುಕುಳಿಯುವುದಿಲ್ಲ. ನಾಲ್ಕು ವರ್ಷಗಳ ಬಳಿಕ ಮರಿ ಹಂತ ದಾಟಿ ದೊಡ್ಡದಾಗುವ ಗಿಬ್ ಪಕ್ಷಿ, 12ರಿಂದ 15 ವರ್ಷಗಳವರೆಗೂ ಬದುಕಿರುತ್ತದೆ. ಒಂದು ಹೆಣ್ಣು ಗಿಬ್ ಪಕ್ಷಿಯು ತನ್ನ ಜೀವಿತಾವಧಿಯಲ್ಲಿ ನಾಲ್ಕರಿಂದ ಐದು ಮರಿಗಳನ್ನು ಮಾತ್ರ ಪೋಷಿಸಿಕೊಳ್ಳಲು ಸಾಧ್ಯವಾಗುತ್ತದೆ’ ಎಂದು ಡಬ್ಲ್ಯುಐಐ ವಿಜ್ಞಾನಿ ಖೇರ್ ತಿಳಿಸಿದರು.

‘ಮೊಟ್ಟೆಗಳನ್ನು ತಾಯಿ ಪಕ್ಷಿಯಿಂದ ದೂರ ಮಾಡುವುದು ಸರಿಯೇ?’ ಎಂದು ಖೇರ್ ಅವರೆದುರು ಪ್ರಸ್ತಾಪ ಮಾಡಿದೆ.

‘ಈ ಪಕ್ಷಿಗಳ ಸಂಖ್ಯೆ ತಮ್ಮಷ್ಟಕ್ಕೆ ಹೆಚ್ಚಳವಾಗಲು ಸಾಧ್ಯವಿಲ್ಲ. ಅವು ಕಾಡಿನ ಗೂಡುಗಳಲ್ಲಿ ಹಾಕುವ ಮೊಟ್ಟೆಗಳಿಂದ ಬದುಕುಳಿಯುವ ಮರಿಗಳ ಪ್ರಮಾಣ ಶೇ. 37ರಷ್ಟು. ಕೃತಕ ವಿಧಾನದಲ್ಲಿ ಕಾವಿನಿಂದ ಹೊರಬರುವ ಮರಿಗಳ ಪ್ರಮಾಣ ಶೇ. 96ಕ್ಕೆ ಹೆಚ್ಚಳವಾಗಿದೆ. ಹೀಗಾಗಿ ಮೊಟ್ಟೆಗಳನ್ನು ಈ ರೀತಿ ಸಂರಕ್ಷಿಸಲೇಬೇಕಿದೆ’ ಎಂದರು.

### ಕರ್ನಾಟಕದಲ್ಲಿ ಹುಲ್ಲುಗಾವಲು ಅಭಿವೃದ್ಧಿ

ಸುಪ್ರೀಂ ಕೋರ್ಟ್ ಮೇಲ್ವಿಚಾರಣೆ ಮತ್ತು ರಾಷ್ಟ್ರೀಯ ಬಸ್ಟರ್ಡ್ ಪಕ್ಷಿಯ ಪುನರುತ್ಥಾನ ಯೋಜನೆ ಭಾಗವಾಗಿ ಕೇಂದ್ರ ಸರ್ಕಾರ ಬಸ್ಟರ್ಡ್ ಪಕ್ಷಿಗಳನ್ನು ಅರಣ್ಯಕ್ಕೆ ಹಾರಿಬಿಡುವ ಉದ್ದೇಶ ಹೊಂದಿದೆ. ಈ ಯೋಜನೆ ‘ಡೆಸರ್ಟ್ ನ್ಯಾಷನಲ್ ಪಾರ್ಕ್’ನಿಂದಲೇ 2026ರಿಂದ ಆರಂಭವಾಗಲಿದೆ ಎಂದು ವಿಜ್ಞಾನಿಗಳು ತಿಳಿಸಿದ್ದಾರೆ. ಕರ್ನಾಟಕವು ಬಸ್ಟರ್ಡ್ ಪಕ್ಷಿಗಳ ಆಗಮನಕ್ಕಾಗಿ ಕಾಯುತ್ತಿದೆ. ರಾಣೆಬೆನ್ನೂರಿನಲ್ಲಿ ಅರಣ್ಯ ಇಲಾಖೆಯು ನೈಸರ್ಗಿಕ ಹುಲ್ಲುಗಾವಲು ಸ್ಥಾಪಿಸುತ್ತಿದೆ. ಸಿರುಗುಪ್ಪದಲ್ಲಿ ಕೂಡ ಒಂದು ಸಾವಿರ ಹೆಕ್ಟೇರ್‌ನಲ್ಲಿ ಹುಲ್ಲುಗಾವಲು ಅಭಿವೃದ್ಧಿ ಪ್ರಕ್ರಿಯೆ ನಡೆಯುತ್ತಿದೆ.

‘ಬಸ್ಟರ್ಡ್ ಪಕ್ಷಿ ನೋಡಲು ಕರ್ನಾಟಕದಿಂದ ರಾಜಸ್ಥಾನಕ್ಕೆ 1600 ಕಿ.ಮೀ. ಪ್ರಯಾಣಿಸಬೇಕಾಯಿತು. ಎರಡು ರಾಜ್ಯ ಸರ್ಕಾರ ಒಪ್ಪಂದಕ್ಕೆ ಸಹಿ ಹಾಕಿದರೆ ಮತ್ತು ಕೇಂದ್ರ ಪರಿಸರ ಸಚಿವಾಲಯ ಅನುಮತಿ ನೀಡಿದರೆ, ಕರ್ನಾಟಕದಲ್ಲಿಯೂ ಈ ಪಕ್ಷಿಗಳ ಮರುಪರಿಚಯ 2028–29ರ ಆರಂಭದಲ್ಲಿಯೇ ಆಗಬಹುದು’ ಎಂದು ವಿಜ್ಞಾನಿ ದತ್ತ ತಿಳಿಸಿದರು.

ಅನುವಾದ: ನಾಗರಾಜ ಚಿನಗುಂಡಿ